# ಆಹಾ ಸುದ್ದಿ!

★ ಸಸಿತೋಟ



ಅಮೆರಿಕಾದ ಲೂಯಿಸ್‌ವಿಲ್ಲಾದಲ್ಲಿ ಈ ಅಸ್ಥಿಪಂಜರ ಜೀಪ್ ಓಡಿಸುವ ದೃಶ್ಯ ಸಾಮಾನ್ಯ. ಅಮೆರಿಕದಲ್ಲಿ ವಾಹನಗಳಿಗೆ ಎಡ ಬದಿಗೆ ಸ್ಟೀರಿಂಗ್ ಇರುತ್ತದೆ. ಆದರೆ ಈ ಜೀಪ್‌ಗೆ ಬಲ ಬದಿಗೆ ಸ್ಟೀರಿಂಗ್ ಇದ್ದು ಜೀಪ್‌ನ ಮಾಲೀಕ ಎಡಬದಿಗೆ ನಕಲಿ ಸ್ಟೀರಿಂಗ್ ಮುಂದೆ ನಕಲಿ ಅಸ್ಥಿಪಂಜರ ಕೂಡಿಸಿ ಸ್ವಲ್ಪ ಹಾಸ್ಯಪ್ರಜ್ಞೆ ಮೆರೆದ. ಈಗ ಒಂಟಿಯಾಗಿ ಜೀಪ್‌ನಲ್ಲಿ ಹೋದರೆ ಜನ 'ನಿನ್ನ ಅಸ್ಥಿಪಂಜರ ಎಲ್ಲಿ?' ಎಂದು ಕೇಳುತ್ತಾರಂತೆ. ಜೀಪ್ ಮಾಲೀಕ ತನ್ನ ಮೈ ಮುಟ್ಟಿ ಜೀವವಿದೆಯೇ ಎಂದು ನೋಡಿಕೊಳ್ಳುವಂತಹ ಪರಿಸ್ಥಿತಿ ತಂದಿಟ್ಟಿದೆಯಂತೆ ಈ ಹಾಸ್ಯಪ್ರಜ್ಞೆ.

ರಷ್ಯಾ 'ನಿಜವಾದ ಕುಟುಂಬ', 'ಕೌಟುಂಬಿಕ ಮೌಲ್ಯಗಳು' ಎಂದು ಸಾರುವ ಬಾವುಟಗಳನ್ನು ಬಿಡುಗಡೆ ಮಾಡಿದೆಯಂತೆ. ಬಾವುಟದಲ್ಲಿ ತಂದೆ- ತಾಯಿ ಜೊತೆ ಮೂವರು ಮಕ್ಕಳ ಚಿತ್ರ ತೋರಿಸಿ ಹೆಚ್ಚು ಹೆಚ್ಚು ಮಕ್ಕಳನ್ನು ಪಡೆಯುವಂತೆಯೂ ಪರೋಕ್ಷ ಸಲಹೆ ನೀಡಿದೆಯಂತೆ ಪುಟಿನ್ ಸರ್ಕಾರ. ಅತ್ತ ಅಮೆರಿಕ ಸಲಿಂಗಿಗಳ ಮದುವೆಗೆ ಮುದ್ರೆ ಒತ್ತುತ್ತಿದ್ದಂತೆಯೇ ಇತ್ತ ರಷ್ಯಾ ಬಾವುಟ ಬಿಡುಗಡೆ ಮಾಡಿರುವುದರ ಹಿಂದೆ ಸಕಾರಣಗಳಿವೆ ಅಲ್ಲವೇ!



ಬರ್ಲಿನ್‌ನಲ್ಲಿ ನಡೆದ 'ಡಿಸೈನರ್ ಫಾರ್ ಟುಮಾರೋ' ಫ್ಯಾಷನ್ ಶೋನಲ್ಲಿ ರೂಪದರ್ಶಿ ಪ್ರದರ್ಶಿಸಿದ ಉಡುಪಿದು. ಇಂದಿನ ದಿನಗಳು ಎಲ್ಲವನ್ನೂ ತೆರೆದಿಡಲು ಇರುವಂಥವು. ಆದರೆ ನಾಳೆಗಳು ಹೇಗೋ ಏನೋ ಎಂದು ನೋಡಲಾರದ ಭಯದಲ್ಲಿ ಎಲ್ಲವನ್ನೂ ಮುಚ್ಚಿಕೊಂಡಂತಿದೆ.

ಈ ಬಾರಿಯ ಬ್ರಿಟನ್ನಿನ ಟೀನ್ ಟೆಕ್ ಪ್ರಶಸ್ತಿ 14ರ ಹರೆಯದ ಹೈಸ್ಕೂಲ್ ಹುಡುಗರಿಗೆ ಸಿಕ್ಕಿದೆಯಂತೆ. ಲೈಂಗಿಕ ಕಾಯಿಲೆ ಪತ್ತೆಯಾದಾಗ ಬಣ್ಣ ಬದಲಾಯಿಸುವ ಕಾಂಡೋಮ್‌ಗಳನ್ನು ಸಂಶೋಧನೆ ಮಾಡಿ ಎಂದು ಸಲಹೆ ನೀಡಿದ್ದಕ್ಕಾಗಿ ಈ ಪ್ರಶಸ್ತಿಯಂತೆ. ಒಂದೊಂದು ಕಾಯಿಲೆ ಪತ್ತೆಯಾದಾಗಲೂ ಕಾಂಡೋಮ್ ಯಾವ ರಂಗು ಬದಲಾಯಿಸಬೇಕು ಎಂದೂ ಸಲಹೆ ನೀಡಿದ್ದಾರಂತೆ. ಸಂಶೋಧಕರೇನೋ ಈ ಹುಡುಗರನ್ನು ಸಂಪರ್ಕಿಸಿದ್ದಾರಂತೆ. ಆದರೆ ಒಟ್ಟಿಗೆ ಎರಡು- ಮೂರು ಕಾಯಿಲೆಗಳಿದ್ದರೆ ಕಾಮನಬಿಲ್ಲಿನ ಎಲ್ಲಾ ರಂಗು ಮೂಡುತ್ತದೆಯೋ ಎಂದು ತಲೆ ಕೆಡಿಸಿಕೊಳ್ಳುವ ಸರದಿ ಸಂಶೋಧಕರದ್ದು.



ಸ್ಯಾನ್ ಡಿಯಾಗೋದಲ್ಲಿ ಕಾಮಿಕ್ಸ್ ಪಾತ್ರಗಳ ಜಾತ್ರೆಯೇ ನಡೆಯಿತು. ಅಲ್ಲಿ ಬಂದವರಿಗೆಲ್ಲರಿಗೂ 'ನಂಬಿಕೆಯ ಜಿಗಿತ' ಎಂದು ಈ ರೀತಿ ಉಚಿತ ಜಿಗಿತದ ಅವಕಾಶ ಇತ್ತಂತೆ. ನಂಬಿಗೆಯ ಪ್ರಶ್ನೆ ಎಂದು ಗುಂಡಿಗೆ ಕೈಯಲ್ಲಿ ಹಿಡಿದುಕೊಂಡು ಜಿಗಿದವನೊಬ್ಬನ ಗುಂಡಿಗೆ ಕೊನೆಗೂ ಕೈ ಕೊಟ್ಟಿತಂತೆ. ಈಗ ಸಂಘಟಕರು ಪೊಲೀಸ್, ಕೋರ್ಟ್ ನಂಬಿಕೊಂಡು ಕೂರುವ ಪರಿಸ್ಥಿತಿ ಬಂದಿದೆಯಂತೆ.

ವಿಕ್ಟೋರಿಯ ರಾಣಿಯ ಈ ಒಳ ಉಡುಪನ್ನು ಇತ್ತೀಚೆಗೆ ಬ್ರಿಟನ್ನಿನಲ್ಲಿ ಹರಾಜು ಹಾಕಲಾಯಿತು. ಸೊಂಟದ ಅಳತೆ 45 ಇಂಚಂತೆ. ದೇಹವನ್ನು ಫುಲ್ ಕವರ್ ಮಾಡುವ ಈ ಉಡುಪಿನ ಹರಾಜಿಗೆ ಅಲ್ಲಿಯ ಮಾಧ್ಯಮವೂ ಫುಲ್ ಕವರೇಜ್ ನೀಡಿತ್ತಂತೆ. ಖರೀದಿಸಿದವರ ಇರಾದೆ ಮಾತ್ರ ಬಹಿರಂಗವಾಗಿಲ್ಲ.

